ಕ್ರಮೇಣ ಹೊರಜಗತ್ತನ್ನು ಗುರುತಿಸಿ ಇತರಿಗಾಗಿ ಬಾಳುವುದನ್ನು ಕಲಿಯುತ್ತದೆ. ಆದರೆ ಎಷ್ಟೋ ಜನರಲ್ಲಿ ಈ ಬೆಳವಣಿಗೆ ಉಂಟಾಗದಿರುವುದು ಶೋಚನೀಯ. ಸಾಮಾಜಿಕ ಪ್ರಜ್ಞೆ ವಿಕಾಸವಾದಂತೆ ವಿಶ್ವಪ್ರಜ್ಞೆ ಕೂಡ ವಿಕಾಸವಾಗುತ್ತದೆ. ಆಗ ಭಗವಂತನಿಗಾಗಿ ಕರ್ಮ ಮಾಡುವ ಪ್ರವೃತ್ತಿ ಜಾಗೃತವಾಗುತ್ತದೆ. ಮೇಲೆ ಸೂಚಿಸಿದ ನೈತಿಕ ಬೆಳವಣಿಗೆಯು ಮೂರು ಹಂತಗಳನ್ನು Egocentric (ಅಹಂ ಕೇಂದ್ರಿತ), Ethnocentric (ಜನಾಂಗ ಕೇಂದ್ರಿತ) World-centric (ವಿಶ್ವಕೇಂದ್ರಿತ) ಎಂದು ಕರೆಯುತ್ತಾರೆ.

ಜ್ಞಾನವು ಎಲ್ಲ ಕರ್ಮಗಳನ್ನೂ ಹೇಗೆ ಸುಟ್ಟುಹಾಕುತ್ತದೆ ಎಂಬುದನ್ನು ಶ್ರೀಕೃಷ್ಣನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾನೆ:

**ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ ।**
**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥ (೪:೩೭)**

"ಎಲೈ ಅರ್ಜುನ, ಚೆನ್ನಾಗಿ ಪ್ರಜ್ವಲಿಸುತ್ತಿರುವ ಅಗ್ನಿಯು ಕಟ್ಟಿಗೆಗಳನ್ನು ಹೇಗೆ ಸುಟ್ಟು ಬೂದಿ ಮಾಡುತ್ತದೆಯೋ, ಹಾಗೆಯೇ ಜ್ಞಾನವೆಂಬ ಅಗ್ನಿಯು ಕರ್ಮಗಳನ್ನೆಲ್ಲ ಭಸ್ಮಮಾಡಿಬಿಡುತ್ತದೆ."

ಕಟ್ಟಿಗೆಯಲ್ಲಿ ಅಗ್ನಿಯು ಇರುತ್ತದೆ; ಆದರೆ ಅವ್ಯಕ್ತವಾಗಿರುತ್ತದೆ, ಅಜ್ಞಾತವಾಗಿರುತ್ತದೆ. ಹೊರಗಿನ ಅಗ್ನಿಯು ಅದರ ಹೊರಕವಚವನ್ನು ಸುಟ್ಟುಹಾಕಿ ಅದರೊಳಗಿರುವ ಅಗ್ನಿಯು ಪ್ರಜ್ವಲಿಸುವ ಅಗ್ನಿಯೊಂದಿಗೆ ಒಂದಾಗುವಂತೆ ಮಾಡುತ್ತದೆ. ಹಾಗೆಯೇ ಜ್ಞಾನಾಗ್ನಿಯು ಅಜ್ಞಾನವನ್ನು ನಾಶಮಾಡಿ ನಮ್ಮೊಳಗಿರುವ ಆತ್ಮಜ್ಞಾನವನ್ನು ಪ್ರಕಾಶಗೊಳಿಸುತ್ತದೆ. ಕಟ್ಟಿಗೆಯು ಒದ್ದೆಯಾಗಿದ್ದರೆ ಅದು ಬೆಂಕಿಯನ್ನೇ ಆರಿಸಿಬಿಡುತ್ತದೆ. ಹಾಗೆಯೇ ನಮ್ಮ ವ್ಯಕ್ತಿತ್ವವು ತೀವ್ರ ಪ್ರಾಪಂಚಿಕತೆಯಿಂದ ಒದ್ದೆಯಾಗಿದ್ದರೆ ಅದು ಅಧ್ಯಾತ್ಮಜ್ಞಾನವನ್ನು ಒಳಗೆ ಪ್ರವೇಶಿಸುವುದಕ್ಕೇ ಬಿಡುವುದಿಲ್ಲ. ಅಲ್ಪ ಸ್ವಲ್ಪ ಪ್ರವೇಶಿಸಿದರೂ ಅದು ಕೂಡ ಪ್ರಾಪಂಚಿಕ ಜ್ಞಾನವಾಗಿಯೇ ಪರಿವರ್ತಿತವಾಗುತ್ತದೆ. ಅಂದರೆ ಅಂತಹ ವ್ಯಕ್ತಿಯು ಅಧ್ಯಾತ್ಮ ಜ್ಞಾನವನ್ನೂ ಪ್ರಾಪಂಚಿಕ ಪ್ರಯೋಜನಕ್ಕಾಗಿಯೇ ಉಪಯೋಗಿಸಿಕೊಳ್ಳುತ್ತಾನೆ. ಕಟ್ಟಿಗೆಯನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಬೇಕು. ಆಗ ಅದನ್ನು ಬೆಂಕಿಗೆ ಹಾಕಿದಾಗ ಅದು ಧಗಧಗಿಸಿ ಉರಿಯುತ್ತದೆ. ಹಾಗೆಯೇ ನಮ್ಮ ವ್ಯಕ್ತಿತ್ವವನ್ನು ಸಾಧುಸಂಗದ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ಭಕ್ತಿಯ ತೈಲವನ್ನು ಅದಕ್ಕೆ ಸೇರಿಸಿದರೆ, ಒಳಗೆ ಸ್ವಲ್ಪ ಒದ್ದೆ ಇದ್ದರೂ, ಜ್ಞಾನಾಗ್ನಿಯು ಅದನ್ನು ಸಂಪೂರ್ಣವಾಗಿ ಸುಟ್ಟುಹಾಕಿಬಿಡುತ್ತದೆ.

ವ್ಯಕ್ತಿತ್ವವು ಜ್ಞಾನಾಗ್ನಿಯಲ್ಲಿ ಚೆನ್ನಾಗಿ ಬೆಂದಮೇಲೆ ಅದಕ್ಕೆ ಮತ್ತೆ ಪುನರ್ಜನ್ಮವಿಲ್ಲ. ಮಡಕೆಗಳು ಚೆನ್ನಾಗಿ ಬೆಂದಮೇಲೆ ಒಡೆದುಹೋದರೆ ಮತ್ತೆ ಅದನ್ನು ಮಡಕೆಯನ್ನಾಗಿ ಕುಂಭಕಾರನು ಮಾಡುವುದಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಆದರೆ ಒದ್ದೆಯಾಗಿರುವಾಗಲೇ ಒಡೆದುಹೋದರೆ ಅದರಿಂದ ಇನ್ನೊಂದು ಮಡಕೆ ಮಾಡುತ್ತಾರೆ. ಹಾಗೆಯೇ ನಮ್ಮ ವ್ಯಕ್ತಿತ್ವವು ಪ್ರಾಪಂಚಿಕದಿಂದ ಒದ್ದೆಯಾಗಿದ್ದರೆ ಮತ್ತೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. ಮನಸ್ಸು ಒಂದು ಮಣ್ಣಿನ ಮುದ್ದೆ ಇದ್ದ ಹಾಗೆ. ಅದಕ್ಕೆ ಯಾವುದೇ ಆಕಾರವನ್ನು ಕೊಡಬಹುದು. ನಾವು ವಿಷಯವಸ್ತುಗಳ ಆಕಾರವನ್ನು ಕೊಟ್ಟು, ವಿಷಯಜ್ಞಾನದಿಂದ ಅದನ್ನು ಬೇಯಿಸುತ್ತೇವೆ. ಆದರೆ ವಿಷಯಜ್ಞಾನವು ಪ್ರತಿಬಿಂಬಿತ ಬೆಳಕು, ಚಂದ್ರನ ಬೆಳಕಿನಂತೆ. ಅದು ಅಷ್ಟು ಪ್ರಖರವಾಗಿರುವುದಿಲ್ಲ. ಅದು ಮತ್ತೆ ಮತ್ತೆ ಒಡೆದುಹೋಗುತ್ತದೆ, ಹೀಗಾಗಿ ಮತ್ತೆ ಮತ್ತೆ ಬೇಯಿಸಬೇಕಾಗುತ್ತದೆ. ಇದರಿಂದಾಗಿ ನಮ್ಮ ಮನಸ್ಸು ಛಿದ್ರಛಿದ್ರವಾಗುತ್ತದೆ. ಅದರ ಬದಲು ಅದಕ್ಕೆ ಆಧ್ಯಾತ್ಮಿಕ ಆಕಾರವನ್ನು ಕೊಟ್ಟು, ಆತ್ಮಜ್ಞಾನಾಗ್ನಿಯಿಂದ (ಇದು ಮೂಲ, ಪ್ರತಿಫಲನವಲ್ಲ) ಬೇಯಿಸಿದರೆ ಆ ಆಕಾರ ಸ್ಥಿರವಾಗಿ ಉಳಿಯುತ್ತದೆ. ಈ ಆಕಾರವೂ ಕಡೆಯಲ್ಲಿ ಒಡೆದುಹೋಗುತ್ತದೆ. ಅದೇ ಮುಕ್ತಿ.

*(ಮುಂದುವರೆಯುತ್ತದೆ)*

ಸ್ಫೂರ್ತಿ ಪ್ರಭ

## ದೋಷ ಯಾರದ್ದು?

**ಜೆಮ್‌ಷೆಡ್‌ಜೀ ಟಾಟಾ ಭಾರತದ ಅತ್ಯಂತ ದೊಡ್ಡ ಕೈಗಾರಿಕೋದ್ಯಮಿ. ಸತತ ಪ್ರಯತ್ನ, ಪ್ರಾಮಾಣಿಕತೆಯಿಂದ ಮೇಲೆ ಬಂದವರು. ಅವರು ಒಮ್ಮೆ ತಮ್ಮ ಸಹಾಯಕರೊಡನೆ ಬೀದಿಯೊಂದರಲ್ಲಿ ನಡೆದು ಹೋಗುತ್ತಿದ್ದರು. ಅವರ ಪಕ್ಕದಲ್ಲಿ ಕೂಲಿಯೊಬ್ಬ ಭಾರಿ ಮೂಟೆಯೊಂದನ್ನು ಹೊರಲಾರದೆ ಹೊತ್ತು ಬಂದ. ಮೂಟೆಯ ಭಾರದಿಂದ ಅವನು ತುಂಬ ಬಳಲಿದ್ದ. ಬೆವರು ಸುರಿಯುತ್ತಿತ್ತು. ಮೇಲುಸಿರು ಬರುತ್ತಿತ್ತು.**

**ಆಕಸ್ಮಿಕವಾಗಿ ಮೂಟೆಯ ಭಾರದಿಂದ ಅತ್ತಿತ್ತ ವಾಲಾಡಿದ ಕೂಲಿಯವನು ಜೆಮ್‌ಷೆಡ್‌ಜೀಯವರಿಗೆ ಡಿಕ್ಕಿ ಹೊಡೆದನು. ಅವರು ಆಯತಪ್ಪಿದರು. ಕೆಳಗೆ ಬಿದ್ದರು. ಅವರ ಪೇಟ ಉರುಳಿ ಪಕ್ಕದ ಚರಂಡಿಗೆ ಬಿತ್ತು. ಹತ್ತಿರದಲ್ಲೇ ಇದ್ದ ಅವರ ಸಹಾಯಕ ಗಾಬರಿಗೊಂಡ. ಓಡಿಬಂದು ಅವರನ್ನು ಮೇಲೆತ್ತಿದ. ಕೂಲಿಯವನು ಹೆದರಿ ನಿಂತಿದ್ದ. ತನ್ನಿಂದ ಪ್ರಮಾದವಾಯಿತು ಎಂದು ಕೊರಗುತ್ತಿದ್ದ. ಕೈಮುಗಿದು ಅವರಲ್ಲಿ ಕ್ಷಮೆ ಕೇಳತೊಡಗಿದ. ಅವನ ಕಣ್ಣುಗಳಲ್ಲಿ ನೀರು ಹರಿದಿತ್ತು. ಸಹಾಯಕ ಯೋಚಿಸುತ್ತಿದ್ದ, "ಇನ್ನು ಕೂಲಿಗಾರನ ಗ್ರಹಚಾರ ಆರಂಭವಾಯಿತು. ಮಾಲೀಕರು ಅವನಿಗೆ ಸರಿಯಾದ ಬುದ್ಧಿ ಕಲಿಸುವರು."**

**ಆದರೆ ಅಲ್ಲಿ ನಡೆದದ್ದೇ ಬೇರೆ. ಸಹಾಯಕ ಅಚ್ಚರಿಗೊಂಡ. ಜೆಮ್‌ಷೆಡ್‌ಜೀ ಟಾಟಾ ಮುಂದೆ ಹೋಗಿ ಕೂಲಿಯವನ ಹೆಗಲಿನ ಮೇಲೆ ಕೈಯಿಟ್ಟು ಅವನಿಗೆ ಸಮಾಧಾನ ಹೇಳಿದರು. ಕೂಲಿಯವನನ್ನು ಬೈಯಲಿಲ್ಲ, ಗದರಿಸಲಿಲ್ಲ, ಛೀಮಾರಿ ಹಾಕಲಿಲ್ಲ, ಶಿಕ್ಷೆ ಕೊಡಿಸುವುದಾಗಿ ಬೆದರಿಸಲಿಲ್ಲ. "ನೀನು ದು:ಖಿಸುವ ಅಗತ್ಯವಿಲ್ಲ. ಹೀಗೆ ನೀನು ನನ್ನಲ್ಲಿ ಕ್ಷಮೆ ಕೇಳುವುದು ಬೇಡ. ನೀನು ಭಾರವನ್ನು ಹೊತ್ತುಬರುತ್ತಿದ್ದೆ. ತುಂಬ ಬಳಲಿದ್ದೆ. ನನ್ನನ್ನು ಗಮನಿಸಲಿಲ್ಲ. ಅಕಸ್ಮಿಕವಾಗಿ ನನಗೆ ಡಿಕ್ಕಿ ಹೊಡೆದೆ. ಬೇಕೆಂದೇ ನೀನು ಹೀಗೆ ಮಾಡಿಲ್ಲ. ನನ್ನದೇ ತಪ್ಪು. ಭಾರಹೊತ್ತು ಬರುವ ನಿನ್ನನ್ನು ಕಂಡು ನಾನು ಪಕ್ಕಕ್ಕೆ ಸರಿಯಬೇಕಿತ್ತು" ಎಂದು ಹೇಳಿ ಅವನಿಗೆ ನೂರರ ಒಂದು ನೋಟು ಕೊಟ್ಟರು. ಕೂಲಿಯವನು ಕೃತಜ್ಞತೆಯಿಂದ ಅವರನ್ನು ನೋಡಿದ.**

(**ಆಧಾರ**: *ಸಾರ್ಥಕ ಬದುಕಿಗೆ ನೂರು ಸ್ಫೂರ್ತಿ ಕತೆಗಳು* ; **ಲೇಖಕರು**: ಎಂ. ವಿ. ನಾಗರಾಜರಾವ್)